I5M9L3

## ಅಧ್ಯಾಯ–16

# ಮೌರ್ಯರು ಮತ್ತು ಕುಶಾಣರು

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಭಾರತ ಕಂಡ ಮೊದಲ ಸಾಮ್ರಾಜ್ಯ ಮೌರ್ಯರದು ಎಂದು ತಿಳಿಯುವುದು.
- ಮೌರ್ಯ ಸಾಮ್ರಾಜ್ಯದ ಸುಪ್ರಸಿದ್ಧ ದೊರೆ ಅಶೋಕನ ಸಾಧನೆ, ಆಡಳಿತ ಮತ್ತು ಕೊಡುಗೆಗಳ ಬಗ್ಗೆ ತಿಳಿಯುವುದು.
- ಕುಶಾಣರ ಇತಿಹಾಸ, ಹಾಗೂ ಕಾನಿಷ್ಕನ ಆಡಳಿತ ಮತ್ತು ವಾಸ್ತುಶಿಲ್ಪದ ಕೊಡುಗೆಗಳ ಬಗ್ಗೆ ತಿಳಿಯುವುದು.
- ಮೌರ್ಯರ ಕಾಲದಲ್ಲಿನ ಅಶೋಕನ ಸಾಮ್ರಾಜ್ಯದ ಪ್ರದೇಶವನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.

## ಮೌರ್ಯರ ಸಾಮ್ರಾಜ್ಯ

©KTBS Not to be republished

ಭಾರತ ಕಂಡ ಮೊತ್ತಮೊದಲ ಸಾಮ್ರಾಜ್ಯ ಮೌರ್ಯರದು. ಇವರು ಮಗಧದಿಂದ ರಾಜ್ಯವನ್ನಾಳಿದರು. ಚಂದ್ರಗುಪ್ತಮೌರ್ಯ, ಬಿಂದುಸಾರ ಹಾಗೂ ಅಶೋಕ ಈ ಮನೆತನದ ರಾಜರುಗಳಲ್ಲಿಯೇ ಪ್ರಮುಖರು. ಈ ರಾಜಮನೆತನವು ಚಂದ್ರಗುಪ್ತಮೌರ್ಯನಿಂದ ಸ್ಥಾಪನೆಯಾಯಿತು. ಇವನ ಪ್ರಖ್ಯಾತಿಯನ್ನು ಗ್ರೀಕರ ರಾಯಭಾರಿಯಾಗಿದ್ದ ಮೆಗಾಸ್ತನೀಸನು 'ಇಂಡಿಕಾ'ದಲ್ಲಿ ದಾಖಲಿಸಿ ಅಮರಗೊಳಿಸಿದನು. ಇಂಡಿಕಾದಲ್ಲಿ ಏನೆಲ್ಲ ವಿವರಿಸಲ್ಪಟ್ಟಿದೆ ಎನ್ನುವುದು ನಮಗೆ ತಿಳಿದಿಲ್ಲ. ಇದು ನಮಗೆ ಇಂದಿಗೂ ಲಭ್ಯವಾಗಿಲ್ಲದ ಕೃತಿ. ಇದರ ವಿವರಣೆಯ ತುಣುಕುಗಳು ಮಾತ್ರ ಬೇರೆ ಗ್ರೀಕ್ ಬರಹಗಾರರ ಕೃತಿಗಳಲ್ಲಿ ಉಲ್ಲೇಖವಾಗಿದೆ. ಚಂದ್ರಗುಪ್ತ ಮೌರ್ಯನ ಮಂತ್ರಿಯಾಗಿದ್ದವನು ವಿಷ್ಣುಗುಪ್ತ. ಇವನು ಕೌಟಿಲ್ಯನೆಂದು, ಚಾಣಕ್ಯನೆಂದೂ ಪ್ರಖ್ಯಾತನಾದವನು. ಇವನ ವಿಚಾರಗಳು ಅರ್ಥಶಾಸ್ತ್ರವೆಂಬ ಕೃತಿಯಲ್ಲಿ ವಿವರಿಸಲ್ಪಟ್ಟಿವೆ.

**ಅರ್ಥಶಾಸ್ತ್ರ**

1902ರಲ್ಲಿ ಮೈಸೂರಿನ ಓರಿಯಂಟಲ್ ಗ್ರಂಥಾಲಯದಲ್ಲಿ ಆರ್. ಶಾಮಾಶಾಸ್ತ್ರಿಯವರು ಕೌಟಿಲ್ಯನು ರಚಿಸಿದ ಅರ್ಥಶಾಸ್ತ್ರದ ಹಸ್ತಪ್ರತಿಯನ್ನು ಪತ್ತೆಮಾಡಿದರು. ಇದು ಪಾಶ್ಚಾತ್ಯ ಜಗತ್ತು ಕಂಡುಕೊಂಡ ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ್ಯಾಡಳಿತ ಕ್ರಮಗಳು, ಅರಸ, ಪ್ರಧಾನಿ ಮತ್ತಿತರರ ಜವಾಬ್ದಾರಿಗಳನ್ನು, ವಿದೇಶಾಂಗ ನೀತಿಯನ್ನು, ಹಣಕಾಸಿನ ನಿರ್ವಹಣೆಯನ್ನು ಚರ್ಚಿಸಲಾಗಿದೆ. ಗೂಢಚಾರ ಇಲಾಖೆ, ಸೈನ್ಯ ವ್ಯವಸ್ಥೆಯ ಬಗ್ಗೆ ವಿಶೇಷ ಒತ್ತನ್ನು ಅರ್ಥಶಾಸ್ತ್ರದಲ್ಲಿ ನೀಡಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಸಾವಿರಾರು ವರ್ಷಗಳ ನಂತರವೂ ತನ್ನ ವೈಶಿಷ್ಟ್ಯದಿಂದಾಗಿ ಜಗತ್ತಿನಾದ್ಯಂತ ವಿದ್ವಾಂಸರನ್ನು ಆಕರ್ಷಿಸುತ್ತಿದೆ.

ಅಶೋಕನು ಈ ಮನೆತನದ ಸುಪ್ರಸಿದ್ಧ ದೊರೆ. ಈ ಕಾಲದಲ್ಲಿ ಐದು ಪ್ರಮುಖ ನಗರ ಕೇಂದ್ರಗಳನ್ನು ನಾವು ಗುರುತಿಸಬಹುದು. ಅವೆಂದರೆ ಮೌರ್ಯರ ರಾಜಧಾನಿಯಾಗಿದ್ದ ಪಾಟಲಿಪುತ್ರ, ತಕ್ಷಶಿಲ, ಉಜ್ಜಯಿನಿ, ಕಳಿಂಗ ಹಾಗೂ ಸುವರ್ಣಗಿರಿ. ಇವು ಬಹುಮುಖ್ಯ ಸಂಪರ್ಕಮಾರ್ಗಗಳೂ ಆಗಿದ್ದವು. ತಕ್ಷಶಿಲೆಯು ವಾಯುವ್ಯ ಭಾರತದ ದ್ವಾರವಾಗಿತ್ತು. ಉಜ್ಜಯಿನಿ ಉತ್ತರದಿಂದ ದಕ್ಷಿಣದ ವ್ಯಾಪಾರ

ವಿವಿಧ ಕೇಂದ್ರಗಳಿಂದ ವಿಶಾಲವಾದ ಭೂ ಪ್ರದೇಶದ ಆಡಳಿತವನ್ನು ಅಶೋಕನು ನಡೆಸಿದನು. ಎಲ್ಲ ಕೇಂದ್ರಗಳೂ ರಾಜನ ಆಶೋತ್ತರಗಳನ್ನೇ ಸಾರಿದವು. ಅವನ ಆಶೋತ್ತರಗಳನ್ನು ಶಾಸನಗಳ ಮೂಲಕ ವ್ಯಕ್ತಪಡಿಸಲಾಯಿತು. ಇವುಗಳು ಶಿಲಾಶಾಸನವಾಗಿ ಹಾಗೂ ಕಂಭಶಾಸನಗಳಾಗಿ ನಮಗೆ ದೊರೆತಿರುವ ಮೊಟ್ಟಮೊದಲ ಶಾಸನಗಳಾಗಿವೆ. ಅಶೋಕ ಮಹಾರಾಜನು ಕಳಿಂಗ ಯುದ್ಧದ ನಂತರ ಆದ ಪ್ರಾಣಹಾನಿಯಿಂದ ಬದಲಾದನು. ಬುದ್ಧನು ಬೋಧಿಸಿದ 'ದಯೆ' ಇವನನ್ನು ಪ್ರಭಾವಿಸಿತು. ನಂತರ ಅವನು ಬುದ್ಧನ ವಿಚಾರಗಳನ್ನು ದೇಶಾದ್ಯಂತ ಸಾರಿದನು. ಈ ಕಾರ್ಯಕ್ಕಾಗಿಯೇ ಧರ್ಮ ಮಹಾಮಾತ್ರರನ್ನು ನೇಮಿಸಿದನು. ಅಶೋಕನು ಹೊರಡಿಸಿದ ಶಾಸನಗಳಲ್ಲಿ ಧರ್ಮದ ವಿಚಾರಗಳು ವ್ಯಕ್ತವಾಗಿವೆ. ಇವು ಅಶೋಕ ಧರ್ಮವೆಂದೇ ಪ್ರಖ್ಯಾತವಾಗಿವೆ.


ನಾಲ್ಕು ಸಿಂಹಗಳ ಪೀಠದಲ್ಲಿ ಆಕರ್ಷಕ ಧರ್ಮಚಕ್ರ

> ಅಶೋಕನ ಅನೇಕ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ. ಇವುಗಳು ಬ್ರಾಹ್ಮಿಲಿಪಿಯಲ್ಲಿವೆ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿಯೂ ಅಶೋಕನ ಶಿಲಾಶಾಸನಗಳು ಪತ್ತೆಯಾಗಿವೆ. ಅಶೋಕನ ಸಾರನಾಥ ಕಂಭವೊಂದರಲ್ಲಿ ವ್ಯಕ್ತವಾಗಿರುವ ಚಿಹ್ನೆಯನ್ನು ಇಂದು ನಾವು ಭಾರತದ ರಾಜಲಾಂಛನವಾಗಿ ಬಳಸಿಕೊಂಡಿದ್ದೇವೆ.

©KTBS Not to be republished

ವ್ಯಾಪಕ ವ್ಯಾಪಾರ ಹಾಗೂ ಕೃಷಿಯ ಬೆಳವಣಿಗೆಯನ್ನು ಈ ಕಾಲದಲ್ಲಿ ಕಾಣುತ್ತೇವೆ. ಕೃಷಿಯನ್ನು ಹೆಚ್ಚಿಸಲು ಸರಕಾರ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ವಿಶೇಷ ತೆರಿಗೆ ವಿನಾಯಿತಿಗಳ ಸೌಲಭ್ಯವನ್ನು ಈ ಹಿನ್ನೆಲೆಯಲ್ಲಿ ನೀಡಲಾಗಿತ್ತು. ವಿಶಾಲ ಭೂ ಪ್ರದೇಶದ ಆಳ್ವಿಕೆಯನ್ನು ನಡೆಸಲು ವಿವಿಧ ಅಧಿಕಾರಿಗಳಿದ್ದರು. ಶಾಶ್ವತ ಸೈನ್ಯದ ಅಗತ್ಯವೂ ಅವರಿಗಿತ್ತು. ಇವೆಲ್ಲವನ್ನು ನೆರವೇರಿಸಲು ತೆರಿಗೆ ಬೇಕಾಗಿತ್ತು. ಇದೇ ಅಲ್ಲದೆ ಭೂ ಕಂದಾಯವು ಸಹ ರಾಜನ ಮೂಲ ಆದಾಯವಾಗಿತ್ತು. ಇವುಗಳ ಸಂಗ್ರಹಣೆಯಲ್ಲಿಯು ವಿವಿಧ ಅಧಿಕಾರಿಗಳು ಶ್ರಮಿಸುತ್ತಿದ್ದರು. ಗೂಢಚಾರರು ಮಾಹಿತಿಗಳನ್ನು ರಾಜನಿಗೆ ತಿಳಿಸುತ್ತಿದ್ದರು. ನದಿ ಹಾಗೂ ಭೂ ಹಾದಿಗಳನ್ನು ನಿಯಂತ್ರಿಸುವ ಮೂಲಕ ವ್ಯಾಪಾರ ಹಾಗೂ ವಾಣಿಜ್ಯದ ಮೇಲೆ ಹತೋಟಿಯನ್ನು ಹೊಂದಿದ್ದರು. ಇವುಗಳ ಮೇಲೆ ವಿವಿಧ ತೆರಿಗೆಗಳನ್ನು ವಿಧಿಸಲಾಗಿತ್ತು.

## ಕುಶಾಣರು

ಗ್ರೀಕರ ನಂತರ ಭಾರತೀಯ ಚರಿತ್ರೆ ಹಾಗೂ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದವರು ಕುಶಾಣರು. ಬೌದ್ಧ ಧರ್ಮಕ್ಕೆ ವಿಶೇಷ ಚಲನೆಯನ್ನು ನೀಡಿದವರು ಇವರು. ಮಹಾಯಾನಪಂಥವು ಇವರ ಆಶ್ರಯದಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಪಡೆಯಿತು. ಗಾಂಧಾರ ಶಿಲ್ಪಕಲೆಯು ಇವರಿಂದ ವಿಕಸಿತಗೊಂಡಿತು.

## ಅಭ್ಯಾಸಗಳು

### I ಕೆಳಕಂಡ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.

1 ಚಾಣಕ್ಯನು ________ ಎಂದು ಪ್ರಖ್ಯಾತನಾದವನು.

2 ಮೌರ್ಯರ ರಾಜಧಾನಿ ________ .

3 ಕುಶಾಣ ರಾಜ ಮನೆತನದ ಸಂಸ್ಥಾಪಕ ________ .

4 ಕನಿಷ್ಕನ ರಾಜಾಳ್ವಿಕೆಯ ಹೊಸ ಯುಗವನ್ನು ________ ಎಂದು ಕರೆಯುತ್ತಾರೆ.

### II ಸಂಕ್ಷಿಪ್ತವಾಗಿ ಉತ್ತರಿಸಿ.

5 ಅಶೋಕನ ಕಾಲದ ಪ್ರಮುಖ ನಗರಗಳನ್ನು ಹೆಸರಿಸಿ.

6 ಅಶೋಕನ ಆಡಳಿತದ ಬಗ್ಗೆ ವಿವರಣೆ ಕೊಡಿರಿ.

7 ಕುಶಾಣರು ಯಾವ ಸಂತತಿಗೆ ಸೇರಿದವರು ?

8 ಕನಿಷ್ಕನ ಸಾಮ್ರಾಜ್ಯದ ವಿಸ್ತರಣೆ ಎಲ್ಲಿಯವರೆಗೆ ಹರಡಿತ್ತು ?

### III ಚಟುವಟಿಕೆಗಳು.

9 ಗಾಂಧಾರ ಕಲೆಯ ಬಗ್ಗೆ ವಿವರಣೆ ತಿಳಿದುಕೊಳ್ಳಿ.

10 ಕನಿಷ್ಕನ ಕಾಲದಲ್ಲಿ ನಡೆದ ಬೌದ್ಧ ಸಮ್ಮೇಳನದ ಬಗ್ಗೆ ನಿಮ್ಮ ಉಪಾಧ್ಯಾಯರಿಂದ ಹೆಚ್ಚಿನ ವಿವರಣೆ ಪಡೆದುಕೊಳ್ಳಿ.

©KTBS Not to be republished

***

# ಅಧ್ಯಾಯ–17

# ಗುಪ್ತರು ಹಾಗೂ ವರ್ಧನರು


C8W5J1

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಗುಪ್ತರ ಸಾಮ್ರಾಜ್ಯದ ವ್ಯಾಪ್ತಿಯನ್ನು ಭಾರತದ ಭೂಪಟದಲ್ಲಿ ಗುರುತಿಸುವುದು.
- ಗುಪ್ತ ಸಾಮ್ರಾಜ್ಯದ ಪ್ರಸಿದ್ಧ ದೊರೆಗಳು, ವ್ಯಾಪ್ತಿ ಮತ್ತು ಬೆಳವಣಿಗೆಯನ್ನು ತಿಳಿಯುವುದು.
- ಗುಪ್ತ ಸಾಮ್ರಾಜ್ಯದ ಆಡಳಿತ, ಸಾಹಿತ್ಯ ಮತ್ತು ವಿಜ್ಞಾನದ ಕೊಡುಗೆಗಳನ್ನು ತಿಳಿಯುವುದು.
- ವರ್ಧನ ಸಾಮ್ರಾಜ್ಯದ ಬೆಳವಣಿಗೆ, ಸಾಹಿತ್ಯಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಬಗ್ಗೆ ತಿಳಿಯುವುದು.

ಶತಮಾನಗಳ ರಾಜಕೀಯ ಅನಿಶ್ಚಿತತೆಯ ನಂತರ ಸಾ.ಶ.4ನೆಯ ಶತಮಾನದಲ್ಲಿ ಗುಪ್ತರ ಸಾಮ್ರಾಜ್ಯವು ಉದಯಿಸಿತು. ಸಂಸ್ಕೃತ ಭಾಷೆ ಹಾಗೂ ಅದರಿಂದ ಮೂಡಿದ ಅಪಾರ ಸಾಹಿತ್ಯವು ಈ ಕಾಲದ ಕನ್ನಡಿ. ಮಗಧ ಪ್ರದೇಶದಿಂದ ಇವರು ತಮ್ಮ ನೆಲೆಯನ್ನು ಕಂಡುಕೊಂಡರು. ಮೊದಲನೆಯ ಚಂದ್ರಗುಪ್ತನು ಲಿಚ್ಛವಿಯ ಯುವರಾಣಿಯನ್ನು ಮದುವೆಯಾಗಿ ತನ್ನ ರಾಜ್ಯದ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡನು. ಇವನಿಂದ ಸಾ.ಶ. 320 ರಲ್ಲಿ 'ಗುಪ್ತಶಕೆ'ಯು ಪ್ರಾರಂಭವಾಯಿತೆಂದು ಅಭಿಪ್ರಾಯಪಡಲಾಗಿದೆ. ಇವನು ಮಹಾರಾಜಾಧಿರಾಜನೆಂದು ಕರೆಸಿಕೊಂಡನು.

©KTBS Not to be republished



# ಅರ್ಥಶಾಸ್ತ್ರ

## ಅಧ್ಯಾಯ–28

## ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳು

U7Z2D9

**ಈ ಅಧ್ಯಾಯದ ಅಧ್ಯಯನದ ನಂತರ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.**

- ಆರ್ಥಿಕ ಮೂಲ ಪರಿಕಲ್ಪನೆಗಳ ಬಗೆಗೆ ಅರ್ಥೈಸುವಿರಿ.
- ಬೇಡಿಕೆ, ಪೂರೈಕೆ, ವಿತರಣೆ, ಉತ್ಪಾದನೆಗಳ ಆಂತರಿಕ ಸಹ ಸಂಬಂಧಗಳ ಬಗ್ಗೆ ಅರಿಯುವಿರಿ.
- ರಾಷ್ಟ್ರದ ಆರ್ಥಿಕ ಅಭಿವೃದ್ಧಿ.
- ಶ್ರಮದ ಪ್ರಾಮುಖ್ಯತೆ.

ಅರ್ಥಶಾಸ್ತ್ರ ಸುಲಭವಾಗಿ ಅರ್ಥವಾಗಬೇಕಾದರೆ ಅದರಲ್ಲಿ ಹೆಚ್ಚು ಬಳಕೆಯಲ್ಲಿರುವ ಪಾರಿಭಾಷಿಕ ಪದಗಳ ಅರಿವು ಅಗತ್ಯ. ಇವು ನಮ್ಮ ದಿನನಿತ್ಯದ ಬಳಕೆಯಲ್ಲಿರುವುದು. ಆದರೂ ಅರ್ಥಶಾಸ್ತ್ರದಲ್ಲಿ ಅವುಗಳಿಗೆ ನಿರ್ದಿಷ್ಟವಾದ ಅರ್ಥ ಮತ್ತು ವ್ಯಾಪ್ತಿ ಇದೆ. ಆದ್ದರಿಂದ ಕೆಲವು ಆಯ್ದ ಪರಿಕಲ್ಪನೆಗಳ ಸಂಕ್ಷಿಪ್ತ ಪರಿಚಯ ಅತ್ಯಗತ್ಯ.

©KTBS Not to be republished

**ಬೇಡಿಕೆ**

ಬೇಡಿಕೆ ಬಯಕೆಯಲ್ಲಿ ಬಯಕೆಯ ಜೊತೆಗೆ ಕೊಳ್ಳುವ ಮನೋಭಾವ ಮತ್ತು ಹಣವನ್ನು ವೆಚ್ಚ ಮಾಡುವ ಶಕ್ತಿ ಇದ್ದರೆ ಮಾತ್ರ ಬೇಡಿಕೆ ಎನಿಸಿಕೊಳ್ಳುತ್ತದೆ. ನಿಗದಿಯಾದ ಬೆಲೆಗೆ ನಿಗದಿಯಾದ ಕಾಲದಲ್ಲಿ ಕೊಳ್ಳುವ ಆರ್ಥಿಕ ಸರಕಿನ ಪ್ರಮಾಣವೇ ಬೇಡಿಕೆ. ಸಾಮಾನ್ಯವಾಗಿ ಬೆಲೆಗಳು ಹೆಚ್ಚಿದಂತೆಲ್ಲ ಬೇಡಿಕೆ ಇಳಿಯುತ್ತಾ ಹೋಗುತ್ತದೆ. ಬೆಲೆಗಳು ಇಳಿದಂತೆಲ್ಲ ಬೇಡಿಕೆ ಹೆಚ್ಚುತ್ತ ಹೋಗುತ್ತದೆ.

ಉತ್ಪಾದನಾ ಕ್ಷೇತ್ರದ ಮೇಲೆ ಬೇಡಿಕೆಯ ಪ್ರಭಾವ ಅತಿ ಹೆಚ್ಚು. ಬೇಡಿಕೆ ಹೆಚ್ಚಾದಾಗ ಸಾಮಾನ್ಯವಾಗಿ ಉತ್ಪಾದನೆ, ಉದ್ಯೋಗ, ವರಮಾನ ಹಾಗೂ ಪೂರೈಕೆ ಅಧಿಕಗೊಳ್ಳುತ್ತದೆ. ಜನರ ಜೀವನಮಟ್ಟ ಉತ್ತಮವಾಗಿರುತ್ತದೆ. ರಾಷ್ಟ್ರ ಪ್ರಗತಿಯ ದಾರಿಯಲ್ಲಿ ಮುಂದುವರಿಯುತ್ತದೆ. ಬೇಡಿಕೆ ಕಡಿಮೆಯಾದಾಗ ಸಾಮಾನ್ಯವಾಗಿ ಉತ್ಪಾದನೆ ವರಮಾನ ಹಾಗೂ ಪೂರೈಕೆ ಇಳಿಯುತ್ತದೆ. ನಿರುದ್ಯೋಗ ಹೆಚ್ಚುತ್ತದೆ, ಜನರ ಜೀವನ ಮಟ್ಟ ಕುಗ್ಗುತ್ತದೆ. ರಾಷ್ಟ್ರದ ಪ್ರಗತಿಯೂ ಕುಗ್ಗುತ್ತದೆ. ಈ ಕಾರಣದಿಂದ ಬೇಡಿಕೆಯನ್ನು ರಾಷ್ಟ್ರದ ಪ್ರಗತಿಯ ಪ್ರತೀಕ ಎಂದು ಪರಿಗಣಿಸಲಾಗಿದೆ.

**ಪೂರೈಕೆ**

ಮಾರುಕಟ್ಟೆಯಲ್ಲಿ ಗೊತ್ತಾದ ಬೆಲೆಗೆ ಮಾರಾಟಕ್ಕಾಗಿ ಸಿದ್ಧವಾಗಿರುವ ಸರಕು–ಸೇವೆಗಳ ಪ್ರಮಾಣವೇ ಪೂರೈಕೆ ಅಥವಾ ಸರಬರಾಜು. ಸಾಮಾನ್ಯವಾಗಿ ಬೆಲೆ ಹೆಚ್ಚಾದರೆ ಮಾರಾಟಕ್ಕಾಗಿ ಬರುವ ಸರಕು–ಸೇವೆಗಳ ಪ್ರಮಾಣವು ಅಧಿಕಗೊಳ್ಳುತ್ತದೆ. ಉತ್ಪಾದನೆ, ಉದ್ಯೋಗ ಮತ್ತು ವರಮಾನಗಳು ಏರುತ್ತದೆ. ಜನರ ಜೀವನ ಮಟ್ಟ ಸುಧಾರಿಸುತ್ತದೆ. ರಾಷ್ಟ್ರ ಪ್ರಗತಿಯ ದಾರಿಯಲ್ಲಿ ಮುನ್ನಡೆಯುತ್ತದೆ. ಬೆಲೆಗಳು ಕಡಿಮೆಯಾದರೆ ಮಾರಾಟಕ್ಕಾಗಿ ಬರುವ ಸರಕು–ಸೇವೆಗಳ ಪ್ರಮಾಣವು ಇಳಿಯುತ್ತದೆ. ಉತ್ಪಾದನೆ ಮತ್ತು ವರಮಾನಗಳು ಇಳಿದು ನಿರುದ್ಯೋಗ ಹೆಚ್ಚಿ ಜೀವನಮಟ್ಟ ಕುಗ್ಗುತ್ತದೆ. ರಾಷ್ಟ್ರದ ಪ್ರಗತಿ ಕುಂಠಿತಗೊಳ್ಳುತ್ತದೆ.

ಆದರೆ ಕೆಲವು ಸಂದರ್ಭಗಳಲ್ಲಿ ಈ ನಿಯಮದ ಉಲ್ಲಂಘನೆಯಾಗಿ ಬೆಲೆ ಹೇಗೆ ಇರಲಿ ಸರಬರಾಜು ಒಂದೇ ಮಟ್ಟದಲ್ಲಿರುತ್ತದೆ.

ಬೇಡಿಕೆ ಮತ್ತು ಪೂರೈಕೆಗಳಿಗೆ ಎರಡು ಬಹು ಸಮೀಪ ವರ್ತಿಗಳು, ಒಂದರಲ್ಲಿ ಆಗುವ ಬದಲಾವಣೆ ತಕ್ಷಣ ಮತ್ತೊಂದರಲ್ಲಿ ಪ್ರತಿಕ್ರಿಯೆಯನ್ನು ಉಂಟುಮಾಡಿ ಬೆಲೆಗಳ ಮೂಲಕ ವ್ಯಕ್ತವಾಗುತ್ತದೆ. ಉದಾಹರಣೆಗೆ ಬೇಡಿಕೆ ಕಡಿಮೆಯಾದರೆ ಪೂರೈಕೆಯೂ ಕಡಿಮೆಯಾಗಿ ಬೆಲೆಗಳು ಇಳಿಯುತ್ತವೆ. ಬೇಡಿಕೆ ಹೆಚ್ಚಾದರೆ ಪೂರೈಕೆಯೂ ಹೆಚ್ಚಿ ಬೆಲೆ ಏರುತ್ತದೆ. ಒಟ್ಟಿನಲ್ಲಿ ಬೇಡಿಕೆ ಮತ್ತು ಪೂರೈಕೆಗಳ ಮಾರುಕಟ್ಟೆಯಲ್ಲಿನ ಚಟುವಟಿಕೆಗಳ ಎರಡು ಆದಾರ ಸ್ತಂಭಗಳು.

**ಉತ್ಪಾದನೆ**

ಅರ್ಥಶಾಸ್ತ್ರದಲ್ಲಿ ಉತ್ಪಾದನೆ ಎಂಬ ಪದಕ್ಕೆ ವಿಶಾಲವಾದ ಅರ್ಥವಿದೆ. ಇದರಲ್ಲಿ ಸರಕುಗಳ ಉತ್ಪಾದನೆಯು ಜೊತೆಗೆ ಸೇವೆಗಳ ಉತ್ಪಾದನೆಯು ಸೇರಿದೆ. ಹೊರನೋಟಕ್ಕೆ ಉತ್ಪಾದನೆಯಿಂದ ಸಂಪತ್ತಿನ ಸೃಷ್ಟಿ ಆದಂತೆ ಕಂಡು ಬಂದರು, ನಿಜವಾಗಿ ಮಾನವ ಏನನ್ನೂ ಹೊಸದಾಗಿ ಸೃಷ್ಟಿಸಲಾರ. ನೈಸರ್ಗಿಕವಾಗಿ ದೊರೆಯುವ ಸಂಪತ್ತಿಗೆ ಉಪಯುಕ್ತತೆಯನ್ನು ಸೇರಿಸುವ ಕೆಲಸ ಮಾತ್ರ ಅವನಿಂದ ಸಾಧ್ಯ. ಆದ್ದರಿಂದ ಉತ್ಪಾದನೆ ಎಂದರೆ ವಿಶೇಷ ಉಪಯುಕ್ತತೆಯ ಸೃಷ್ಟಿ ಎಂದು ಮಾತ್ರ ಅರಿಯಬೇಕು. ಹೀಗೆ ಉತ್ಪಾದನೆಯಾದ ಸರಕಿಗೆ ಮೌಲ್ಯವು ಇರಬೇಕು.

ಉತ್ಪಾದನಾ ಕರ್ಯ ವಿನಿಯೋಗ, ಸಾಗಣೆ, ವ್ಯಾಪಾರ, ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ. ಉತ್ಪಾದನೆಯಾದ ಸರಕು ಸೇವೆಗಳು ಅನುಭವಿಯ ಕೈಸೇರಿದಾಗ ಮಾತ್ರ ಉತ್ಪಾದನಾ ಕರ್ಯ ಪರ್ಣಗೊಳ್ಳುತ್ತದೆ. ಈ ಕರ್ಯ ಆರಂಭವಾಗಿ ಅಂತ್ಯವಾಗಲು ಕೆಲವು ಸಾಧನ–ಸಂಪತ್ತಿನ ನೆರವು ಅತ್ಯಗತ್ಯ. ಅರ್ಥಶಾಸ್ತ್ರಜ್ಞರು ಉತ್ಪಾದನಾಂಗಗಳು ಎಂದು ಕರೆಯುವ ಪ್ರಕೃತಿ, ಸಂಪತ್ತು, ಶ್ರಮ, ಬಂಡವಾಳ ಮತ್ತು ಉದ್ಯಮ ಸಾಹಸಗಳಿಲ್ಲದೆ ಉತ್ಪಾದನೆ ಸಾಧ್ಯವೇ ಇಲ್ಲ. ಈ ನಾಲ್ಕು ಅಂಗಗಳು ನಿರ್ದಿಷ್ಟ ಪ್ರಮಾಣದಲ್ಲಿ ಒಂದು ಗೂಡಿ ಸಹಕರಿಸಿದರೆ ಮಾತ್ರ ಈ ಕರ್ಯ ಸಾಧ್ಯ. ಕೋಟ್ಯಾಂತರ ಜನ ವಿವಿಧ ಪ್ರಮಾಣ ಮತ್ತು ರೀತಿಯಲ್ಲಿ ಎಡಬಿಡದೆ ಉತ್ಪಾದನಾ ಕರ್ಯದಲ್ಲಿ ತೊಡಗಿರುವುದು ಅನುಭವಗಳ ಕ್ಷೇಮಾಭ್ಯುದಯಕ್ಕಾಗಿಯೇ.

© KTBS
Not to be republished

**ವಿತರಣೆ**

ವಿತರಣೆ ಒಂದು ಪ್ರಮುಖ ಆರ್ಥಿಕ ಚಟುವಟಿಕೆ ಉತ್ಪಾದನಾ ಕರ್ಯ ಪರಿಣಾಮವಾದ ರಾಷ್ಟ್ರೀಯ ವರಮಾನವನ್ನು ಉತ್ಪಾದನಾಂಗಗಳ ನಡುವೆ ಹಂಚುವಂತ ಮಹತ್ವದ ಕಾರ್ಯ ಇದರದ್ದು. ಉತ್ಪಾದನಾಂಗಗಳು ಆದ ಪ್ರಕೃತಿ, ಸಂಪತ್ತು, ಶ್ರಮ, ಬಂಡವಾಳ ಮತ್ತು ಉದ್ಯಮ ಸಾಹಸಿಗಳ ನಡುವೆ ಹಂಚಿಕೆಯಾಗುವ ರಾಷ್ಟ್ರೀಯ ವರಮಾನಕ್ಕೆ ಕ್ರಮವಾಗಿ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭ ಎಂದು ಹೆಸರು. ಆಯಾ ಉತ್ಪಾದನಾಂಗದ ಪಾತ್ರದ ಪ್ರಮಾಣ ಅನುಸಾರವಾಗಿ ವಿತರಣೆ ಆಗಬೇಕು. ಬೇಡಿಕೆ ಮತ್ತು ಪೂರೈಕೆಗಳ ನಡುವೆ ಸಮತೋಲನ ಕಾಪಾಡಿಕೊಂಡು ಬರುವಂತಿರಬೇಕು. ಉತ್ಪಾದನಾ ಕರ್ಯಕ್ಕೆ ಅಡ್ಡಿ–ಆತಂಕಗಳು ಉಂಟಾಗದಂತೆ ಇರಬೇಕು. ಯಾವ ಉತ್ಪಾದನಾ ಅಂಗಕ್ಕೂ ಪ್ರಾಶಸ್ತ್ಯವೂ ಇರಬಾರದು. ನಿರ್ಲಕ್ಷವೂ ಇರಬಾರದು . ಇದು ಆರ್ಥಿಕ ವ್ಯವಸ್ಥೆಯ ಸಮತೋಲನದ ಬೆಳವಣಿಗೆಗೆ ಅಗತ್ಯ. ಉತ್ಪಾದನೆ, ಬೇಡಿಕೆ, ಪೂರೈಕೆ, ಅನುಭೋಗ, ಬೆಲೆಗಳ ನಿರ್ದಾರ ಮೊದಲಾದವು ವಿತರಣೆಯಿಂದ ಬಹುಮಟ್ಟಿಗೆ ಪ್ರಭಾವಿತವಾಗುತ್ತದೆ.

## ಅನುಭೋಗ

ಸರಕು ಸೇವೆಗಳನ್ನು ಬಯಕೆಯ ತೃಪ್ತಿಗಾಗಿ ಉಪಯೋಗಿಸುವುದೇ ಅನುಭೋಗ. ಹೀಗೆ ಅನುಭೋಗಿಸುವ ಸರಕು ಸೇವೆಗಳು ಒಳ್ಳೆಯವೇ ಆಗಿರಬಹುದು. ಇಲ್ಲವೇ ಕೆಟ್ಟವೆ ಆಗಿರಬಹುದು ಎಲ್ಲಿಯವರೆಗೆ ಮಾನವನ ಬಯಕೆಗಳನ್ನು ತೃಪ್ತಿ ಪಡಿಸಬಲ್ಲವೋ ಅಲ್ಲಿಯವರೆಗೂ ಅವು ಸತತವಾಗಿ ಅನುಭವಿಸಲು ಪಡುತ್ತವೆ ಆಧುನಿಕ ರ್ಥಶಾಸ್ತ್ರದಲ್ಲಿ ಅನುಭವಕ್ಕೆ ಮಹತ್ವದ ಸ್ಥಾನ ಇದೆ.

### ಅನುಭೋಗದಲ್ಲಿ ಎರಡು ವಿಧ

1. ಉತ್ಪಾದನೆಗಾಗಿ ಸರಕು ಸೇವೆಗಳನ್ನು ಉಪಯೋಗಿಸುವುದು.
2. ಸಿದ್ಧಮಾಡಿದ ಸರಕು ಸೇವೆಗಳನ್ನು ಬಯಕೆಗಳ ತೃಪ್ತಿಗಾಗಿ ಉಪಯೋಗಿಸುವುದು.

ಅಂದರೆ ಅನುಭೋಗ ಎಂದಾಗ ಬಯಕೆಯ ತೃಪ್ತಿ ಎಂದು ಅರ್ಥ.

ಒಂದು ರಾಷ್ಟ್ರದ ಹಿರಿಮೆ ಜೀವನದ ಮಟ್ಟ ಹಾಗೂ ಉದ್ಯೋಗದ ಪ್ರಮಾಣ ಆಯಾ ರಾಷ್ಟ್ರದ ಅನುಭೋಗದ ಪ್ರಮಾಣವನ್ನು ಅವಲಂಬಿಸಿರುತ್ತದೆ. ಏಕೆಂದರೆ ಆರ್ಥಿಕ ವ್ಯವಸ್ಥೆ ಇರುವುದು ಜನರ ಬಯಕೆಯನ್ನು ತೃಪ್ತಿ ಪಡಿಸುವುದಕ್ಕಾಗಿಯೇ, ಬಯಕೆ ಕೊನೆ ಅನುಭೋಗದಲ್ಲಾಗುತ್ತದೆ. ಅನುಭವಿಸಬೇಕಾದರೆ ಉತ್ಪಾದಿಸಬೇಕು ಮತ್ತು ವಿನಿಮಯವಾಗಬೇಕು. ಉತ್ಪಾದನೆಯಾಗುವುದು ಬಯಕೆಗಳಿಗೋಸ್ಕರವಾಗಿಯೇ, ಅನುಭವ ಹೆಚ್ಚಿನದಾಗ ಉತ್ಪಾದನೆ ಮತ್ತು ಆದಾಯ ಹೆಚ್ಚಿ ಒಳ್ಳೆಯ ಬೆಲೆಯೂ ದೊರೆತು ಪೂರ್ಣ ಉದ್ಯೋಗಕ್ಕೆ ಅವಕಾಶ. ಮಾಡಿಕೊಡುತ್ತದೆ ಅನುಭೋಗ ಕಡಿಮೆಯಾದಾಗ ಉತ್ಪಾದನೆ, ಆದಾಯ ಮತ್ತು ಬೆಲೆಗಳು ಇಳಿದು ನಿರುದ್ಯೋಗ ತಲೆದೋರುತ್ತದೆ. ಅನುಭೋಗ ಮತ್ತು ಉತ್ಪಾದನೆಗಳ ಬಾಂಧವ್ಯ ಅತ್ಯಂತ ನಿಕಟ. ಇವೆರಡೂ ಕೂಡಿ ರಾಷ್ಟ್ರೀಯ ವರಮಾನದ ಮೇಲೆ ಮಹತ್ವದ ಪರಿಣಾಮ ಉಂಟುಮಾಡುತ್ತವೆ.

©KTBS Not to be republished

## ಉಪಯುಕ್ತತೆ

ಅರ್ಥಶಾಸ್ತ್ರದಲ್ಲಿ ಹೆಚ್ಚು ಬಳಕೆಯಲ್ಲಿರುವ ಪದಗಳಲ್ಲಿ ಉಪಯುಕ್ತತೆಯು ಒಂದು. ಮಾನವನ ಬಯಕೆಯನ್ನು ತೃಪ್ತಿಪಡಿಸುವ ಶಕ್ತಿಯೇ ಉಪಯುಕ್ತತೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ಎಲ್ಲಾ ಸರಕು ಸೇವೆಗಳು ಉಪಯುಕ್ತತೆಯನ್ನು ಹೊಂದಿರುತ್ತವೆ. ಆದರೆ ಇದನ್ನು ಅಳೆಯುವುದು ಅಸಾಧ್ಯ. ಇದು ವ್ಯಕ್ತಿ ವ್ಯಕ್ತಿಗೂ ಬದಲಾಗುತ್ತಾ ಹೋಗುತ್ತದೆ. ಒಬ್ಬನೇ ವ್ಯಕ್ತಿಗೆ ಅದು ಒಂದೊಂದು ಸಮಯದಲ್ಲಿ ಒಂದೊಂದು ರೀತಿ ಬದಲಾಗುವುದು ಸಾಧ್ಯ ಅಭಿರುಚಿ ಮತ್ತು ಉಪಯುಕ್ತ ವ್ಯತ್ಯಾಸಗಳನ್ನು ಉಂಟುಮಾಡಬಹುದು.

ಉಪಯುಕ್ತತೆ ತೃಪ್ತಿಯಲ್ಲ. ತೃಪ್ತಿಯನ್ನು ನೀಡುವ ಶಕ್ತಿ. ತೃಪ್ತಿ ಉಪಯುಕ್ತತೆಯ ಪರಿಣಾಮ ಎಂದರೆ, ಉಪಯುಕ್ತತೆ ಇರುವ ಸರಕು ಸೇವೆಗಳು ನಮಗೆ ತೃಪ್ತಿ ನೀಡುತ್ತವೆ. ಉಪಯುಕ್ತತೆಗೆ ಪ್ರಯೋಜನಕ್ಕೂ ಸಂಬಂಧವಿಲ್ಲ. ಸಾಮಾನ್ಯವಾಗಿ ಎರಡು ಪದಗಳನ್ನು ಒಂದೇ ಅರ್ಥದಲ್ಲಿ ಬಳಸಲಾಗುತ್ತಿದ್ದರೂ ಅದು ಸರಿಯಲ್ಲ. ಉದಾಹರಣೆಗೆ ಮಾದಕ ಪದಾರ್ಥಗಳ ಸೇವನೆಯಿಂದ ಯಾವ ಪ್ರಯೋಜನವೂ ಇಲ್ಲದಿದ್ದರೂ, ಉಪಯುಕ್ತತೆಯನ್ನು ಹೊಂದಿರುತ್ತವೆ.

ಅರ್ಥಶಾಸ್ತ್ರಜ್ಞರು ಉಪಯುಕ್ತತೆಯನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾರೆ.

1. ಮೂಲೋಕ ಉಪಯುಕ್ತತೆ
2. ಆಕಾರೋಪ ಉಪಯುಕ್ತತೆ
3. ಸಮಯೋಪ್ಯುಕ್ತತೆ
4. ಸ್ಥಳ ಉಪಯುಕ್ತತೆ

ಮೂಲರೂಪದಲ್ಲಿ ಉಪಯೋಗಿಸಬಹುದಾದ ಸರಕು ಸೇವೆಗಳನ್ನು ಮೂಲ ಉಪಯುಕ್ತತೆಯನ್ನು ಹೊಂದಿರುತ್ತದೆ ಉದಾಹರಣೆಗೆ ನೀರು, ಹಣ್ಣು, ಮೊಟ್ಟೆ ಇತ್ಯಾದಿ.

ಪ್ರಕೃತಿ ನಮಗೆ ನೀಡುವ ಸರಕುಗಳಿಗೆ ಒಂದು ಆಕಾರವನ್ನು ಕೊಟ್ಟು ಬಳಕೆಗೆ ಯೋಗ್ಯವನ್ನಾಗಿ ಮಾಡುವುದರಿಂದ ಆಕಾರೋಪ ಯುಕ್ತತೆ ಹೊಂದಿರುತ್ತದೆ. ಉದಾಹರಣೆಗೆ ಕಲ್ಲಿಗೆ ಶಿಲ್ಪಿ ಕೊಡುವ ವಿಗ್ರಹದ ಆಕಾರ, ಮರಕ್ಕೆ ಮರಗೆಲಸದವನು ಕೊಡುವ ಕುರ್ಚಿ ಅಥವಾ ಮೇಜಿನ ರೂಪ.

ಯಾವುದಾದರೂ ಒಂದು ಸರಕನ್ನು ಹೇರಳವಾಗಿ ದೊರೆಯುವ ಕಾಲದಲ್ಲಿ ಕೂಡಿಟ್ಟು ಅದು ದೊರೆಯದ ಸಮಯದಲ್ಲಿ ಪೂರೈಸಿದರೆ ಸರಕಿನ ಮೌಲ್ಯ ಹೆಚ್ಚು ಸಮಯ ಉಪಯುಕ್ತತೆಯನ್ನು ಸೃಷ್ಟಿಸುತ್ತದೆ. ಉದಾಹರಣೆಗೆ ಮಾವಿನಕಾಯಿಯನ್ನು ಅದರ ಕಾಲದಲ್ಲಿ ಕೂಡಿಟ್ಟು ಉಪ್ಪಿನಕಾಯಿಯ ರೂಪದಲ್ಲಿ ಬೇರೆ ಕಾಲದಲ್ಲಿ ಪೂರೈಸುವುದು.

ಒಂದೆಡೆ ಹೇರಳವಾಗಿ ದೊರಕುವ ಸರಕುಗಳನ್ನು ಅವು ದೂರದ ಸ್ಥಳಗಳಿಗೆ ಸಾಗಿಸಿ ಅನುಭೋಗಿಗಳಿಗೆ ದೊರಕುವಂತೆ ಮಾಡುವುದರಿಂದ ಸ್ಥಳ ಉಪಯುಕ್ತತೆಯನ್ನು ಸೃಷ್ಟಿಮಾಡಬಹುದು. ಉದಾಹರಣೆಗೆ ಶಿಮ್ಲಾದಲ್ಲಿನ ಸೇಬನ್ನು, ಕೊಡಗಿನ ಕಿತ್ತಳೆ ಹಣ್ಣುಗಳನ್ನು ಬೆಂಗಳೂರಿನಲ್ಲಿ ದೊರೆಯುವಂತೆ ಮಾಡುವುದು.

©KTBS Not to be republished

**ಬೆಲೆ**

ಹಣದ ರೂಪದಲ್ಲಿ ವ್ಯಕ್ತವಾಗುವ ಮೌಲ್ಯವೇ ಬೆಲೆ, ಒಂದು ಸರಕು ಅಥವಾ ಸೇವೆಗೆ ಬದಲಾಗಿ ಕೊಡಬೇಕಾದ ಹಣವೇ ಬೆಲೆ. ಬೆಲೆಗಳ ಅಧ್ಯಯನಕ್ಕೆ ಅರ್ಥಶಾಸ್ತ್ರದಲ್ಲಿ ಪ್ರಮುಖ ಸ್ಥಾನ. ಅಗಾಧವಾದ ಬೇಡಿಕೆ ಇರುವಾಗ ಸರಕು ಸೇವೆಗಳನ್ನು ಹೆಚ್ಚು ಸಂಖ್ಯೆಯಲ್ಲಿರುವ ಅನುಭೋಗಿಗಳಿಗೆ ಹಂಚುವುದೇ ಒಂದು ಸಮಸ್ಯೆ. ಈ ಕರ್ತವ್ಯವನ್ನು ಬೆಲೆ ಮಾಡುವುದು. ಬೇಡಿಕೆ ಮತ್ತು ಪೂರೈಕೆಗಳ ಸಮೀಕರಣವೆ ಬೆಲೆ ಮಾಧ್ಯಮದ ಮುಖ್ಯ ಕರ್ತವ್ಯ. ಇಂತಹ ಸಮೀಕರಣವಾದ ಬೆಲೆಗಳು ಸಮಾನಾಂತರದಲ್ಲಿ ಇರುತ್ತವೆ. ಆಗ ಬೇಡಿಕೆ ಪೂರೈಕೆಗೆ ಸಮನಾಗಿರುತ್ತದೆ. ಸರಕು–ಸೇವೆಗಳ ಕೊರತೆಯಾಗಲಿ, ಹೆಚ್ಚಳ ವಾಗಲಿ ಇರುವುದಿಲ್ಲ, ಒಂದು ವೇಳೆ ಬೇಡಿಕೆ ಮತ್ತು ಪೂರೈಕೆಗಳ ನಡುವೆ ವ್ಯತ್ಯಾಸ ಉಂಟಾದರೆ ಸರಕು–ಸೇವೆಗಳ ಬೆಲೆಯು ವ್ಯತ್ಯಾಸಗೊಳ್ಳುತ್ತದೆ. ಆದರೆ ಕಾಲಾನಂತರ ಮತ್ತೊಂದು ಸಮತೆಯ ಬೆಲೆ ನಿಗದಿಯಾಗುತ್ತದೆ.

ಆಗ ಬೇಡಿಕೆ ಮತ್ತು ಪೂರೈಕೆ ಮತ್ತು ಬೆಲೆ ಸಮೀಕರಣವಾಗುತ್ತದೆ. ಹೀಗೆ ಬೆಲೆಯ ನಿರ್ದಾರದಲ್ಲಿ ಬೇಡಿಕೆ ಮತ್ತು ಪೂರೈಕೆಗಳ ಪಾತ್ರ ಮಹತ್ತರವಾದದ್ದು.

**ಲಾಭ**

ಸಾಮಾನ್ಯ ಭಾಷೆಯಲ್ಲಿ ಉತ್ಪಾದನೆಗೆ ಆಗುವ ಕರ್ಚನ್ನು ಕಳೆದ ಮೇಲೆ ಉಳಿಯುವ ಹಣವೇ ಲಾಭ. ಆದರೆ ಅರ್ಥಶಾಸ್ತ್ರಜ್ಞರ ಪ್ರಕಾರ ಉತ್ಪಾದನಾ ಕಾರ್ಯಕ್ಕೆ ಸಲ್ಲಿಸಿದ ಸೇವೆಗೆ ಬದಲಾಗಿ ಉತ್ಪಾದಕ ಗಳಿಸುವ ಪ್ರತಿಫಲವೇ ಲಾಭ. ಇದು ಉತ್ಪಾದನೆಗೆ ನೆರವಾದ ಗೇಣಿ, ಕೂಲಿ ಮತ್ತು ಬಡ್ಡಿಯನ್ನು ಕೊಟ್ಟ ಮೇಲೆ ಉಳಿಯುವ ಹಣ. ಹೀಗೆ ಉಳಿಯುವ ಹಣ ಹೆಚ್ಚಾಗಿರಬಹುದು ಅಥವಾ ಕಡಿಮೆಯಾಗಿರಬಹುದು ಕೆಲವು ವೇಳೆ ಏನು ಉಳಿಯದೆ ಇರಲೂಬಹುದು ಉತ್ಪಾದಕರೆ ಲಾಭ ನಷ್ಟಗಳಿಗೆಹೊಣೆಗಾರರು.

ರ್ಥಿಕ ಕ್ಷೇತ್ರದಲ್ಲಿ ಲಾಭಕ್ಕೆ ಎಲ್ಲಿಲ್ಲದ ಮಹತ್ವ, ಎಲ್ಲಾ ಆರ್ಥಿಕ ಚಟುವಟಿಕೆಗಳಿಗೂ ಲಾಭ ಸಂಪಾದನೆಯ ಉದ್ದೇಶವೇ ಮೂಲ. ಲಾಭ ಹೆಚ್ಚಿದಂತೆಲ್ಲ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತದೆ. ರಾಷ್ಟ್ರದ ಪ್ರಗತಿಯು ತ್ವರಿತವಾಗುತ್ತದೆ. ಲಾಭ ಕಡಿಮೆಯಾದಂತೆ ಆರ್ಥಿಕ ಚಟುವಟಿಕೆಗಳು ಕಡಿಮೆಯಾಗುತ್ತದೆ. ರಾಷ್ಟ್ರದ ಪ್ರಗತಿ ಕುಂಠಿತಗೊಳ್ಳುತ್ತದೆ ಆರ್ಥಿಕ ಮುಗ್ಗಟ್ಟು ತಲೆದೋರುತ್ತದೆ.

**ಸಹಕಾರ**

ಆರ್ಥಶಾಸ್ತ್ರದಲ್ಲಿ ಸಹಕಾರಕ್ಕೆ ವಿಶೇಷವಾದ ಸ್ಥಾನ ಇದೆ. ಒಂದು ರೀತಿಯ ಉದ್ಯಮದ ವ್ಯವಸ್ಥೆಯಾದರೂ, ಇದನ್ನು ಜೀವನದ ವಿಧಾನವೆಂದು ಪರಿಗಣಿಸಲಾಗಿದೆ. ನಿರ್ಲಕ್ಷಿತರಾದ, ಪ್ರಭಾವವಿಲ್ಲದ, ಸಾಧನ ಉಳ್ಳ ಸಾಮಾನ್ಯ ಜನರಿಗೆ ಸಹಕಾರ ದಾರಿದೀಪ. ಕೂಡಿ ದುಡಿದರೆ ಶ್ರೀಮಂತರಿಗೂ ಪ್ರಭಾವ ಶಾಲೆಗಳಿಗೂ ಮಾತ್ರ ಮೀಸಲಾಗಿರುವ ಅನುಕೂಲಗಳನ್ನು ಶ್ರೀಸಾಮಾನ್ಯರು ಪಡೆಯಲು ಸಾಧ್ಯ ಎಂಬುದನ್ನು ಸಹಕಾರಿ ಪದ್ಧತಿ ಸಾಧಿಸಿತೋರಿಸಿದೆ. ಈ ಪದ್ಧತಿ ಯಾರನ್ನು ಶೋಷಿಸುವುದಿಲ್ಲ.

ಸಹಕಾರ ಪದ್ಧತಿ ಜನರು ಇಚ್ಛೆಯಿಂದ ಜೊತೆಗೂಡಿ ಸಮಾನತೆಯ ಆಧಾರದ ಮೇಲೆ ತಮ್ಮ ಆರ್ಥಿಕ ಹಿತರಕ್ಷಣೆಗೆ ದುಡಿಯಲು ಇರುವ ಒಂದು ಅಸಾಮಾನ್ಯ ವ್ಯವಸ್ಥೆ. ಸ್ವ-ಸಹಾಯದಿಂದ ಸಾಧಿಸುವುದು ಇದರ ಮುಖ್ಯ ಗುರಿ. ಇಲ್ಲಿ ಪೈಪೋಟಿಗೆ ಅವಕಾಶವಿಲ್ಲ. ಎಲ್ಲಾ ವ್ಯವಹಾರಗಳನ್ನು ಸದಸ್ಯರೇ ನೋಡಿಕೊಂಡು ಲಾಭವನ್ನು ಹಂಚಿಕೊಂಡು ಶೇರುಗಳಿಗೆ ಸೂಕ್ತ ಲಾಭಾಂಶ ಕೊಟ್ಟು ಸದಸ್ಯರು ಕೊಳ್ಳುವ ಸರಕಿನ ಬೆಲೆಯ ಆಧಾರದ ಮೇಲೆ ಸೋಡಿಯನ್ನು ನೀಡಲಾಗುತ್ತದೆ. ದಲ್ಲಾಳಿಗಳಿಗೆ ಇಲ್ಲಿ ಪ್ರವೇಶವಿಲ್ಲ. ಶೋಷಣೆಗೆ ಅವಕಾಶವಿಲ್ಲ. ಚುನಾಯಿತ ನಿರ್ದೇಶಕರು ಸಂಸ್ಥೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಇಲ್ಲಿ ಸದಸ್ಯರು ಮಾಲೀಕರು ಹೌದು, ಕರ್ಮಿಕರು ಹೌದು.

'ಪ್ರತಿಯೊಬ್ಬರಿಗಾಗಿ ಎಲ್ಲರೂ ಎಲ್ಲರಿಗಾಗಿ ಪ್ರತಿಯೊಬ್ಬರು' ಎನ್ನುವುದೇ ಸಹಕಾರದ ಮಂತ್ರ. ಶೇರುಗಳು ಎಷ್ಟೇ ಇದ್ದರೂ ಪ್ರತೀ ಶೇರುದಾರರಿಗು ಒಂದೇ ಮತವನ್ನು ಹೊಂದಿರುತ್ತಾನೆ. ಅಲ್ಲದೆ, ಒಬ್ಬ ವ್ಯಕ್ತಿ ಪಡೆಯಬಹುದಾದ ಶೇರುಗಳ ಸಂಖ್ಯೆಗೆ ಮಿತಿ ಇರುತ್ತದೆ. ಬೇಕಾದಾಗ ಸದಸ್ಯನಾಗುವ ಬೇಡವಾದಾಗ ಬಿಡುವ ಸ್ವಾತಂತ್ರ್ಯವು ಇರುತ್ತದೆ.

**ರಾಷ್ಟ್ರೀಯ ವರಮಾನ**

ರಾಷ್ಟ್ರವೂ ಸಹ ಒಬ್ಬ ವ್ಯಕ್ತಿಯಂತೆ ವರಮಾನವನ್ನು ಗಳಿಸುತ್ತದೆ ಇದನ್ನೇ ರಾಷ್ಟ್ರೀಯ ವರಮಾನ ಎನ್ನುವುದು ಇದು ಆಯಾ ರಾಷ್ಟ್ರದ ಎಲ್ಲಾ ಉತ್ಪಾದನಾ ಕ್ಷೇತ್ರಗಳಿಂದ ಬರುವ ವಾರ್ಷಿಕ ವರಮಾನದ ಮೊತ್ತ. ರಾಷ್ಟ್ರೀಯ ವರಮಾನವನ್ನು ಕಳೆಯುವುದು ಕಷ್ಟ ಅದರಲ್ಲೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಒಂದು ದೊಡ್ಡ ಸಮಸ್ಯೆಯೇ ಆಗಿದೆ.

©KTBS Not to be republished

ರಾಷ್ಟ್ರೀಯ ವರಮಾನದ ಗಾತ್ರ ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಉತ್ಪಾದನೆ ಹೆಚ್ಚಿದರೆ ರಾಷ್ಟ್ರೀಯ ವರಮಾನವು ಹೆಚ್ಚುತ್ತದೆ (ಜನ ಸಂಖ್ಯೆಯನ್ನು ಆಧರಿಸಿ). ಹೆಚ್ಚುತ್ತಿರುವ ರಾಷ್ಟ್ರೀಯ ವರಮಾನ ರಾಷ್ಟ್ರದ ಅಭಿವೃದ್ಧಿ ಮತ್ತು ಜನರ ಜೀವನ ಮಟ್ಟವನ್ನು ತೋರಿಸುತ್ತದೆ. ಏರುತ್ತಿರುವ ರಾಷ್ಟ್ರೀಯ ವರಮಾನ ರಾಷ್ಟ್ರದ ಆರ್ಥಿಕ ಪ್ರಗತಿಯ ಸಂಕೇತ. ಅಳಿಯುತ್ತಿರುವ ರಾಷ್ಟ್ರೀಯ ವರಮಾನ ರಾಷ್ಟ್ರದ ಆರ್ಥಿಕ ದುಸ್ಥಿತಿ ಮತ್ತು ಜನರ ಕೆಳದರ್ಜೆಯ ಜೀವನ ಮಟ್ಟವನ್ನು ತೋರಿಸುತ್ತದೆ. ಈ ಕಾರಣದಿಂದಲೇ ಎಲ್ಲಾ ರಾಷ್ಟ್ರಗಳು ತಮ್ಮ ರಾಷ್ಟ್ರದ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸತತವಾಗಿ ಪ್ರಯತ್ನಿಸುತ್ತವೆ.

**ತಲಾವರಮಾನ**

ಒಂದು ರಾಷ್ಟ್ರದ ಆದಾಯವನ್ನು ಆ ದೇಶದ ಒಟ್ಟು ಜನಸಂಖ್ಯೆ ಇಂದ ಭಾಗಿಸಿದರೆ ವರಮಾನವು ಲಭಿಸುತ್ತದೆ. ರಾಷ್ಟ್ರೀಯ ವರಮಾನ ಹೆಚ್ಚಾಗಿದ್ದರೆ ತಲಾವರಮಾನವು ಹೆಚ್ಚಾಗಿರುತ್ತದೆ. ಜನರ ಜೀವನಮಟ್ಟವು ಉತ್ತಮವಾಗಿರುತ್ತದೆ ಇದರ ಫಲವಾಗಿ ಜನರು ನೆಮ್ಮದಿಯ ಜೀವನವನ್ನು ಸಾಗಿಸುತ್ತಾರೆ.

ರಾಷ್ಟ್ರೀಯ ವರಮಾನ ಕಡಿಮೆಯಾದಾಗ ತಲಾ ವರಮಾನವೂ ಕಡಿಮೆಯಾಗುತ್ತದೆ ಜನರ ಜೀವನಮಟ್ಟ ಕೆಳದರ್ಜೆಯದ್ದಾಗಿರುತ್ತದೆ. ಬಡತನ ಮತ್ತು ರೋಗರುಜಿನಗಳು ವ್ಯಾಪಿಸಿ ಜನ ಕಷ್ಟದಿಂದ ಜೀವನ ಸಾಗಿಸುತ್ತಿರುತ್ತಾರೆ. ವಿವಿಧ ರಾಷ್ಟ್ರಗಳ ಜನರ ತಲಾ ವರಮಾನವನ್ನು ಹೋಲಿಸಿ ನೋಡುವುದರಿಂದ ಆಯಾ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಮತ್ತು ಜನರ ಜೀವನಮಟ್ಟದ ಅರಿವಾಗುತ್ತದೆ. ಇದರಿಂದ ನಮ್ಮ ಸ್ಥಿತಿಗತಿಗಳ ಸ್ಪಷ್ಟ ಚಿತ್ರವು ಉಂಟಾಗುತ್ತದೆ.

**ಶ್ರಮದ ಮಹತ್ವ**

ಶ್ರಮಿಸಬೇಕು, ಗಳಿಸಬೇಕು ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಬೇಕು ಎನ್ನುವುದು ಮಾನವನ ಸಹಜ ಗುಣ. ಈ ಶ್ರಮ ದೈಹಿಕವಾಗಿಯೂ ಇರಬಹುದು ಇಲ್ಲ ಮಾನಸಿಕವಾಗಿಯೂ ಇರಬಹುದು. ಅಗೆಯುವುದು, ಉಳುವುದು, ಭಾರವನ್ನು ಹೊರುವುದು, ಯಂತ್ರಗಳನ್ನು ನಡೆಸುವಂತಹ ಕೆಲಸ ಮಾಡುವುದು ದೈಹಿಕ ಶ್ರಮಕ್ಕೆ ಉದಾಹರಣೆ. ಅಧ್ಯಾಪಕ, ವಿಜ್ಞಾನಿ, ನ್ಯಾಯವಾದಿ, ಕಾರಕೂನ, ಮೊದಲಾದವರ ದುಡಿಮೆ ಮಾನಸಿಕ ಶ್ರಮಕ್ಕೆ ಉದಾಹರಣೆ. ದೈಹಿಕ ಶ್ರಮಕ್ಕೆ ದೈಹಿಕ ಶಕ್ತಿ ಅಗತ್ಯ, ಮಾನಸಿಕ ಶ್ರಮಕ್ಕೆ ಬುದ್ಧಿಶಕ್ತಿ ಅವಶ್ಯಕ. ಪ್ರಗತಿಪರ ರಾಷ್ಟ್ರಗಳಲ್ಲಿ ವಿದ್ಯಾವಂತರ ಸಂಖ್ಯೆ ಅಧಿಕವಾಗಿದ್ದು ಅವರೆಲ್ಲಾ ಶ್ರಮ ವಹಿಸುತ್ತಾರೆ.

ಮೇಲು ಕೀಳು ಎಂಬ ಭಾವ ಇರಬಾರದು ಸಮಾಜ ಸಹ ಭೇದ ಮಾಡಬಾರದು ಎರಡೂ ವರ್ಗದ ಕೆಲಸಗಾರರಿಗೂ ಸಮಾನ ಗೌರವ ಇರಬೇಕು. ದೈಹಿಕ ಶ್ರಮ ಕೀಳು, ಮಾನಸಿಕ ಶ್ರಮ ಮೇಲು ಎನ್ನುವ ಕೆಟ್ಟ ಭಾವನೆ ಇರಬಾರದು.

ಮಹಾತ್ಮಗಾಂಧಿಯವರು ಶ್ರಮದ ಮಹತ್ವದಲ್ಲಿ ಅಚಲ ವಿಶ್ವಾಸ ಹೊಂದಿದ್ದರು ಇದನ್ನು ಅವರು ಮಾಡಿ ತೋರಿಸಿದರು.

ಅವರಿಗೆ ರಾಷ್ಟ್ರಧ್ಯಕ್ಷರೊಂದಿಗೆ ಮಾತನಾಡುವುದು ಎಷ್ಟು ಮುಖ್ಯವೋ ಕಸಗುಡಿಸುವವನೊಂದಿಗೆ ಮಾತನಾಡುವುದು ಅಷ್ಟೇ ಮುಖ್ಯವಾಗಿತ್ತು.

©KTBS Not to be republished

ವಿದ್ಯಾವಂತರು, ಅನೇಕರು ಮಾನಸಿಕ ಶ್ರಮವನ್ನು ಅರಸಿ ಉದ್ಯೋಗವನ್ನು ಹುಡುಕುವರು ಎಲ್ಲರಿಗೂ ಸಾಲುವಷ್ಟು ಉದ್ಯೋಗಾವಕಾಶ ಸಿಗುವುದಿಲ್ಲ. ದೈಹಿಕ ಶ್ರಮದ ಉದ್ಯೋಗಾವಕಾಶ ಹೆಚ್ಚಾಗಿದೆ. ಮೇಲು–ಕೀಳು ಎಂಬ ಬೇಧಭಾವಗಳನ್ನು ಬಿಟ್ಟು ತನಗೆ ಲಭಿಸುವ ಉದ್ಯೋಗವನ್ನು ಮಾಡಲು ಸಿದ್ಧರಾಗಬೇಕು ಆಗ ಶ್ರಮದ ಮಹತ್ವ ಅರಿವಾಗುತ್ತದೆ ಸಮಾನ ಭಾವನೆ ಉಂಟಾಗುತ್ತದೆ ರಾಷ್ಟ್ರ ಕಟ್ಟುವ ಕಾರ್ಯ ಸಾಧ್ಯವಾಗುತ್ತದೆ.

## ಅಭ್ಯಾಸಗಳು

**I ಈ ಪ್ರಶ್ನೆಗಳಿಗೆ ಉತ್ತರಿಸಿ**

1. ಆಥಶಾಸ್ತ್ರದಲ್ಲಿ ಬೇಡಿಕೆ ಎಂಬುದರ ಅರ್ಥವೇನು?
2. ಉತ್ಪಾದನಾ ಕ್ಷೇತ್ರದಲ್ಲಿ ಬೇಡಿಕೆ ಪ್ರಭಾವವೇನು?
3. ವಿತರಣೆ ಎಂದರೇನು?
4. ವಿತರಣೆ ಸಮರ್ಪಕ ರೀತಿಯಲ್ಲಿ ಮಾಡುವ ಬಗೆ ಹೇಗೆ?
5. ರಾಷ್ಟ್ರೀಯ ವರಮಾನ ಮತ್ತು ತಲಾ ವರಮಾನದ ವ್ಯತ್ಯಾಸಗಳನ್ನು ತಿಳಿಸಿ.
6. ಶ್ರಮದ ಮಹತ್ವವೇನು?

**II ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ**

7. ಬೇಡಿಕೆ ಹೆಚ್ಚಾದಾಗ ಉತ್ಪಾದನೆ__________
8. ಸರಕು ಸೇವೆಗಳನ್ನು ಬಯಕೆಯ ತೃಪ್ತಿಗಾಗಿ ಉಪಯೋಗಿಸುವುದು__________
9. ಒಂದು ರಾಷ್ಟ್ರದ ಆದಾಯವನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ ಲಭಿಸುವುದೇ________
10. ಲಾರಿಗಳಿಂದ ಸರಕುಗಳನ್ನು ತಿಳಿಸುವ ಕೆಲಸದಲ್ಲಿ ತೊಡಗಿರುವವರು ಬರುವ ಶ್ರಮ ವಿಭಾಗ________
11. ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಶಿಕ್ಷಕರು ಈ ಶ್ರಮಕ್ಕೆ ಉದಾಹರಣೆ__________

**III ಚಟುವಟಿಕೆಗಳು**

12. ನಿಮ್ಮ ಶಾಲೆಯ ಸಮೀಪದ ಮಾರುಕಟ್ಟೆಗೆ ಹೋಗಿ ಬೆಲೆಗಳು ಹೆಚ್ಚು ಕಡಿಮೆಯಾದಾಗ ಹೇಗೆ ಬಯಕೆಗಳು ಹೆಚ್ಚು ಕಡಿಮೆಯಾಗುತ್ತವೆ ಎಂಬುದನ್ನು ವೀಕ್ಷಿಸಿ.
13. ಶಾಲೆಯ ವಾಚನಾಲಯಕ್ಕೆ ಬರುವ ಪತ್ರಿಕೆಗಳನ್ನು ಓದಿ ಪ್ರತಿದಿನ ಆರ್ಥಿಕ ಕ್ಷೇತ್ರದಲ್ಲಿ ಆಗುವ ಏರುಪೇರುಗಳನ್ನು ಗಮನಿಸಿ.

✲ ✲ ✲

©KTBS Not to be republished

